ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ

*Published in Hosa Digantha News Paper dated: 30/06/2018*

# ಸಿಬ್ಬಂದಿ, ರೋಗಿಗಳಿಗೆ ತಂಗುದಾಣ ನಿರ್ಮಾಣ

**ಬೆಂಗಳೂರು:** ತ್ಯಾಜ್ಯ ವಸ್ತುಗಳಾದ ಟೈರ್, ಬಾಟಲ್ ಮತ್ತು ಇನ್ನಿತರೆ ವಸ್ತುಗಳನ್ನು ಬಳಸಿ ಗೋಪಾಲನ್ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಅಂಡ್ ಪ್ಲಾನಿಂಗ್ ಸಂಸ್ಥೆ ಯ ಸಿಬ್ಬಂದಿ ಸರ್ ಸಿ.ವಿ ರಾಮನ್ ಸಾರ್ವಜನಿಕ ಆಸ್ಪತ್ರೆಯ ಸಿಬ್ಬಂದಿಗೆ ಅನುಕೂಲವಾಗುವಂತೆ ಖಾಲಿ ಜಾಗದಲ್ಲಿ ಕುಳಿತುಕೊಳ್ಳುವ ವ್ಯವಸ್ಥೆ ನಿರ್ಮಿಸಿದ್ದಾರೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು 8 ವಿದ್ಯಾರ್ಥಿಗಳನ್ನೊಳಗೊಂಡ ತಂಡ ಈ ಕಾರ್ಯ ನಿರ್ವಹಿಸುತ್ತಿದೆ. ಯಾವುದೇ ದುಬಾರಿ ವಸ್ತುಗಳನ್ನು ಖರೀದಿಸದೆ ಕಾವಲ ತ್ಯಾಜ್ಯ ವಸ್ತುಗಳನ್ನು ಬಳಸಿ ಆಸ್ಪತ್ರೆ ಸಿಬ್ಬಂದಿ ಮತ್ತು ರೋಗಿಗಳಿಗೆ ಉಪಯೋಗವಾಗುವಂತೆ ತಂಗುದಾಣ



ನಿರ್ಮಿಸಲಾಗಿದೆ. ಪೀಠೋಪಕರಣಗಳನ್ನು ಕೂಡ ತ್ಯಾಜ್ಯ ವಸ್ತುಗಳಿಂದಲೇ ತಯಾರಾಗಿದೆ. ಒಂದೇ ಜಾಗದಲ್ಲಿ ಕಾಲುದಾರಿ, ಸಣ್ಣ ಕೊಳ ಮತ್ತು ಮಕ್ಕಳಿಗೆ ಆಟದ ಮೈದಾನ ರೂಪಿಸಿದ್ದಾರೆ. ಸಂಸ್ಥೆಯಿಂದ 10 ಸಾವಿರ ಪಡೆದುಕೊಂಡು ಈ ಜನಸ್ನೇಹಿ ಕಾರ್ಯ ನಿರ್ವಹಿಸಿದ್ದಾರೆ ಎಂದರು.